ಅನುಬಂಧ - I

ಕ್ರಮ ಸಂಖ್ಯೆ	ಸರ್ಕಾರಿ ಪ್ರೌಢ ಶಾಲೆಯ ಹೆಸರು	ಬಾಲಕರು	ಬಾಲಕಿಯರು	ಒಟ್ಟು
1	2	3	4	5
01	ಸರ್ಕಾರಿ ಬಾಲಕರ ಪ ಪೂರ್ವ ಕಾಲೇಜು ಚಾಮರಾಜನಗರ	536	—	536
02	ಸರ್ಕಾರಿ ಬಾಲಕಿಯರ ಪ ಪೂ ಕಾಲೇಜು ಚಾಮರಾಜನಗರ	—	763	763
03	ಚಂದಕವಾಡಿ	391	335	726
04	ಸಂತೇಮರಳ್ಳಿ	244	207	451
05	ದೊಡ್ಡರಾಯಪೇಟೆ	119	86	205
06	ಅಮಚವಾಡಿ	184	159	343
07	ಆಲೂರು	295	184	479
08	ಹೊಂಗನೂರು	199	253	432
09	ಬದನಗುಪ್ಪೆ	129	123	252
10	ನಂಜೇದೇವನಪುರ	170	145	315
11	ಹರದನಹಳ್ಳಿ	191	182	373
12	ಮಂಗಲ	122	114	236
13	ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿವೆ	306	253	559
14	ಕುದೇರು	228	236	464
15	ವೆಂಕಟಯ್ಯನಚತ್ರ	293	195	488
16	ತಮಡಹಳ್ಳಿ	101	89	190
17	ಯಾರಗನಹಳ್ಳಿ	58	81	139
18	ಗೂಳಿಪುರ	69	59	128
19	ಯರಗನಹಳ್ಳಿ	77	52	129
20	ನವಿಲೂರು	48	47	95
	ಒಟ್ಟು	4167	3639	7806

ಭಟ್ಕಳ ತಾಲ್ಲೂಕಿಗೆ ಪದವಿ ಪೂರ್ವ ಕಾಲೇಜು ಮಂಜೂರಾತಿ

29 (78) ಶ್ರೀ ನಾಯಕ್ ಜೆ ಡಿ (ಭಟ್ಕಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಖಾಸಗಿ ಕಾಲೇಜುಗಳಿಂದ ಬಡ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯ, ವಂತಿಗೆ ಹಾಗೂ ಹೆಚ್ಚು ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಮುಂದಿನ ವರ್ಷದಲ್ಲಿ ಭಟ್ಕಳ ತಾಲ್ಲೂಕಿಗೆ ಪದವಿ ಪೂರ್ವ ಕಾಲೇಜು ಮಂಜೂರು ಮಾಡಲಾಗುವುದೇ

ಶ್ರೀ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು

ಆ) ಇಲ್ಲ

ಇ) ಪ್ರಸ್ತಾವನೆಯಿರುವುದಿಲ್ಲ

ದಿನಾಂಕ 7 1 2004 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಮಹಿಳೆಯರಿಗೆ ಪದವಿವರೆಗೂ ಉಚಿತ ಶಿಕ್ಷಣ ಯೋಜನೆ

97 (551) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಮಹಿಳೆಯರಿಗೆ ಉಚಿತ ಪದವಿ ಶಿಕ್ಷಣ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗಿದೆಯೇ

ಆ) ಅನುಷ್ಠಾನಕ್ಕೆ ತಂದಿದ್ದರೆ, ಈವರೆಗೂ ಸದರಿ ಯೋಜನೆಯಡಿ ಎಷ್ಟು ಜನರು ಆಯ್ಕೆಯಾಗಿದ್ದಾರ?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು)

ಅ) ಆದರೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಸೂಳ್ಯ ತಾಲ್ಲೂಕಿನಲ್ಲಿ ಡಾ॥ ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ

99 (556) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ಡಾ॥ ಶಿವರಾಮ ಕಾರಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸರಿಯಾದ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಡಾ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಸುಳ್ಯ ತಾಲ್ಲೂಂನ ಬೆಳ್ಳಾರೆಯ ಡಾ॥ ಶಿವರಾಮ ಕಾರಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ಸಮಸ್ಯೆಯನ್ನು ಮನಗಂಡು ಸದರಿ ಕಾಲೇಜಿನ ವಿಸ್ತರಣೆಗಾಗಿ ಹುಡ್ಕೋ